International Journal of Kannada Research
www.kannadajournal.com

ISSN: 2454–5813
IJSR 2015; 1(1): 27-28
© 2015 IJKS
www.kannadajournal.com
Received: 12-06-2015
Accepted: 18-07-2015

**ಪ್ರೊ. ಸಿದ್ದಣ್ಣ ಪಿ. ಬೀಡಗೊಂಡ**
ಕನ್ನಡ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಸವನ-ಬಾಗೇವಾಡಿ, ಜಿಲ್ಲೆ: ಬಿಜಾಪುರ, ಕರ್ನಾಟಕ, ಭಾರತ

**Correspondence**
**ಪ್ರೊ. ಸಿದ್ದಣ್ಣ ಪಿ. ಬೀಡಗೊಂಡ**
ಕನ್ನಡ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಸವನ-ಬಾಗೇವಾಡಿ, ಜಿಲ್ಲೆ: ಬಿಜಾಪುರ, ಕರ್ನಾಟಕ, ಭಾರತ

# ಸಮಾಜ ಸುಧಾರಣೆಯಲ್ಲಿ ಸಮೂಹ ಮಾಧ್ಯಮಗಳ ಪಾತ್ರ

**ಪ್ರೊ. ಸಿದ್ದಣ್ಣ ಪಿ. ಬೀಡಗೊಂಡ**

ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗದಂತೆ ಸಮೂಹ ಮಾಧ್ಯಮವೂ ನಾಲ್ಕನೇಯ ಆಯಾಮವಾಗಿದೆ. ಮೇಲಿನ ಮೂರು ಅಂಗಗಳು ಎಡವಬಹುದು, ಏರು–ಪೇರಾಗಬಹುದು, ಆದರೆ ಸಮೂಹ ಮಾಧ್ಯಮಗಳು ಎಡವಿದರೆ ಪ್ರಜಾಪ್ರಭುತ್ವ ವ್ಯವಸ್ಥೆಗೆ ಧಕ್ಕೆ ಬರುತ್ತದೆ. ಜನಸಮೂಹದ ಹಿತ ಕಾಪಾಡುವ ಮಾಧ್ಯಮಗಳು ಮನೆಯ ಕಾವಲು ನಾಯಿಯಂತೆ ಕೆಲಸಮಾಡುತ್ತವೆ. ಜನ–ಸಮೂಹದ ಸುಧಾರಣೆಗಳಲ್ಲಿ ಸಮೂಹ ಮಾಧ್ಯಮಗಳೂ ಅತ್ಯಂತ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತವೆ. ಸಮೂಹ ಮಾದ್ಯಮಗಳು ಸಮಾಜದ ಕಣ್ಣು ಇದ್ದ ಹಾಗೆ. ಸಮೂಹ ಮಾಧ್ಯಮಗಳು ಪ್ರಗತಿಪರವಾಗಿ, ಸಮಾಜದ ಪರವಾಗಿ, ಸಕಾರಾತ್ಮಕವಾಗಿ, ವಿಮರ್ಶಾತ್ಮಕವಾಗಿ, ಸಾಮಾಜಿಕ ನ್ಯಾಯದಿಂದ ಕೆಲಸ ಮಾಡಬೇಕು. ಸಮೂಹ ಮಾಧ್ಯಮಗಳಾದ ಆಕಾಶವಾಣಿ, ಪತ್ರಿಕೆಗಳು ಮತ್ತು ದೂರದರ್ಶನ ಇವುಗಳು ಸಾಮಾಜಿಕ ಸುಧಾರಣೆಗಳಲ್ಲಿ ಹೇಗೆ ಪ್ರಮುಖ ಪಾತ್ರವನ್ನು ವಹಿಸುತ್ತವೆ ಎಂಬುದರ ವಿಶ್ಲೇಷಣೆಯೇ ಈ ಲೇಖನದ ಉದ್ದೇಶವಾಗಿದೆ.

1947 ರ ಪೂರ್ವದಿಂದಲೂ ಆಕಾಶವಾಣಿ ಸಮೂಹ ಮಾಧ್ಯಮಗಳಲ್ಲಿ ಅತ್ಯಂತ ಪ್ರಮುಖ ಸ್ಥಾನ ಪಡೆದಿದೆ. ಹಿಂದೊಂದು ಕಾಲದಲ್ಲಿ ಆಕಾಶವಾಣಿ ಒಂದು ಪ್ರಮುಖ ಸಮೂಹ ಮಾಧ್ಯಮವಾಗಿತ್ತು. ಆಗ ಗ್ರಾಮೀಣ ಮತ್ತು ಪಟ್ಟಣ ಪ್ರದೇಶದ ಜನರಿಗೆ ತ್ವರಿತಗತಿಯಲ್ಲಿ ಸುದ್ದಿಯನ್ನು ತಲುಪಿಸಲು ಇದು ಪ್ರಮುಖ ಪಾತ್ರ ವಹಿಸುತ್ತಿತ್ತು. ಆಕಾಶವಾಣಿಯಲ್ಲಿ ಬಿತ್ತರವಾಗುತ್ತಿದ್ದ ವಿಚಾರ ದೀಪಿಕೆ, ಚಿಂತನೆ ರೈತರಿಗೆ ಸಲಹೆಗಳು ಹೀಗೆ ಮುಂತಾದವುಗಳು ಜನಸಾಮ್ಯಾನರಿಗೆ ಯೋಗ್ಯ ಮಾರ್ಗದರ್ಶನ ನೀಡುವಲ್ಲಿ ಸಫಲವಾಗಿದ್ದವು. ಅದೇ ರೀತಿ ಆಕಾಶವಾಣಿ ಬಿತ್ತರವಾಗುತ್ತಿದ್ದ ಚರ್ಚಾ ಗೋಷ್ಠಿಗಳು ಹಾಗೂ ನಾಟಕಗಳು ಸಾಮಾಜಿಕ ಸುಧಾರಣೆಯಲ್ಲಿ ಗಣನೀಯ ಪ್ರಭಾವ ಬೀರುತ್ತಿದ್ದವು. ಆಕಾಶವಾಣಿಯಲ್ಲಿ ಪ್ರಸಾರವಾಗುವ ಅನೇಕ ಕಾರ್ಯಕ್ರಮಗಳಿಂದ ಸಾಮಾಜಿಕ ಬದಲಾವಣೆಯಲ್ಲಿ ಗಣನೀಯ ಪರಿವರ್ತನೆಯಾಗಿದ್ದು ಇತಿಹಾಸವೇ ಸರಿ. ಪ್ರಸುತ್ತ ಆಧುನಿಕ ದಿನಮಾನದಲ್ಲಿ ಆಕಾಶವಾಣಿಯ ಪ್ರಭಾವ ಕುಂಠಿತವಾಗಿದೆಯಾದರೂ ಇಂದಿಗೂ ಆಕಾಶವಾಣಿಗೆ ತನ್ನದೆ ಆದ ಕೇಳುಗರ ಸಂಖ್ಯೆ ಇದೆ ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲ. ಪ್ರಜಾಸತ್ತಾತ್ಮಕ ಗಣರಾಜ್ಯವಾದ ಭಾರತ ತನ್ನ ಸಂವಿಧಾನದಲ್ಲಿ ತನ್ನ ಸಮಸ್ತ ನಾಗರೀಕರಿಗೆ ದೊರೆಯ ಬಹುದಾದ ನ್ಯಾಯ, ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಎತ್ತಿ ಹಿಡಿದಿದೆ.

ಆಕಾಶವಾಣಿಯಂತೆ ಪತ್ರಿಕಗಳು ಸತ್ಯಕ್ಕೆ ದೂರವಾದ ಸತ್ಯವನ್ನು ತಿರುಚುವ ಕೆಲಸವನ್ನು ಮಾಡದೆ ಸಮೂಹ ಮಾದ್ಯಮಗಳು ಸರಕಾರ ಮತ್ತು ಇತರ ಪ್ರಭಾವಿಗಳ ಪ್ರಭಾವ ಇರಬಾರದೆಂದು, ಸಮೂಹ ಮಾಧ್ಯಮದ ಇನ್ನೋಂದು ಪ್ರಮುಖ ಅಂಗ– ಪತ್ರಿಕಾ ಮಾಧ್ಯಮ ಅನಾದಿ ಕಾಲದಿಂದಲೂ ಪತ್ರಿಕಾ ಮಾಧ್ಯಮ ಸಾಮಾಜಿಕ ಸ್ವಾಸ್ಥ ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಪತ್ರಿಕೆಯಲ್ಲಿ ಪ್ರಕಟವಾಗುವ ಎಲ್ಲ ಸಂಗತಿಗಳನ್ನು ನಿಜವೆಂದು ನಂಬುವ ಜನಸಾಮಾನ್ಯರ ನಂಬುಗೆಯನ್ನು ಉಳಿಸಿಕೊಂಡು ಹೋಗುವ ಮಹತ್ತರ ಹೊಣೆಗಾರಿಕೆ ಪತ್ರಿಕಾ ರಂಗದ್ದಾಗಿದೆ. ಪತ್ರಿಕಾ ರಂಗದಲ್ಲಿ ಕೆಲಸ ಮಾಡುವ ಪ್ರತಿಯೊಬ್ಬರು ಅದರಲ್ಲೂ ವಿಶೇಷವಾಗಿ ಸುದ್ದಿಗಾರರು ಸಂಪಾದಕರು, ಸಮಾಜದ ಆಗು–ಹೋಗುಗಳನು ಕುಲಂಕುಶವಾಗಿ ಪರಿಶೀಲಿಸಿ ಪ್ರಕಟಿಸಿದಲ್ಲಿ ಅದರಿಂದ ಓದುಗರಿಗೆ ಸ್ವಷ್ಟ ಕಲ್ಪನೆಯನ್ನು ಹಾಗೂ ಭವ್ಯ ಭಾರತದ ನಿರ್ಮಾಣಕ್ಕಾಗಿ ಕಲ್ಪಿಸಿಕೊಂಡ ಕನಸನ್ನು ಸಾಕಾರಗೊಳಿಸುವಲ್ಲಿ ಸಹಕರಿಸಿದಂತಾಗುತ್ತದೆ. ಮೂಲತಹ ಸಮೂಹ ಮಾಧ್ಯಮಗಳು ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗದ ಕಾರ್ಯಕ್ಷಮತೆಯನ್ನು ಗಮನಿಸಿ ಅವುಗಳ ತಪ್ಪು ಒಪ್ಪುಗಳನ್ನು ಬಹಿರಂಗ ಪಡಿಸುವ ನಾಲ್ಕನೆಯ ಅಂಗವೇ ಸಮೂಹ ಮಾಧ್ಯಾಮಗಳಾಗಿವೆ.

ಯಾವುದೇ ಸರಕಾರ ಅಥವಾ ಪ್ರಭಾವಿ ವಲಯ ಮಾಧ್ಯಮವನ್ನು ತನ್ನ ಹಿಡಿತದಲ್ಲಿ ಇರಿಸಿಕೊಳ್ಳುವುದರಿಂದ ಸರಕಾರದ ಲೋಪವನ್ನು ಬಯಲು ಮಾಡಿವಲ್ಲಿ ಮಾಧ್ಯಮಗಳು ಸೋಲುತ್ತವೆ. ದಿನ ನಿತ್ಯ ನಮ್ಮ ಮನೆಗಳಿಗೆ ಬರುವ ಪತ್ರಿಕೆಗಳು ಇಡೀ ವಿಶ್ವವನ್ನೇ ನಮ್ಮ ಮನೆಯ ಬಾಗಿಲಿಗೆ ತರುತ್ತವೆ, ಮತ್ತು ಓದುಗರ ಜ್ಞಾನದ ಮಟ್ಟವನ್ನು ಹೆಚ್ಚಿಸುತ್ತವೆ.

ಇನ್ನೂಳಿದ ಎಲ್ಲಾ ಸಮೂಹ ಮಾಧ್ಯಮಗಳಲ್ಲಿ ದೂರದರ್ಶನ ಅತ್ಯಂತ ಪ್ರಭಾವಿ ಮಾಧ್ಯಮವಾಗಿ ಹೊರ ಹೊಮ್ಮಿದೆ. ಆಧುನಿಕ ತಂತ್ರಜ್ಞಾನದಿಂದಾಗಿ ಇಂದಿನ ದಿನಮಾನದಲ್ಲಿ ಗ್ರಾಮೀಣ ಪ್ರದೇಶದಿಂದ ಹಿಡಿದು ಪಟ್ಟಣ ಪ್ರದೇಶದ ವರಗಿನ ಪ್ರತಿ ಮನೆಗಳಲ್ಲಿ ದೊರದರ್ಶನ ಪೆಟ್ಟಿಗೆ ಇರುವುದನ್ನು ಕಾಣುತ್ತವೆ. ಹೀಗಾಗಿ ದೂರದರ್ಶನಗಳಲ್ಲಿ ಪ್ರತಿದಿನ ನೋಡುವ ವಿದ್ಯಮಾನಗಳು ಜನಸಾಮಾನ್ಯರ ಮನಸ್ಸಿನ ಮೇಲೆ ಹೆಚ್ಚಿನ ಪರಿಣಾಮ ಬೀರುವ ಬೀರುತ್ತವೆ. ಇಡಿ ಜಗತ್ತನ್ನೇ ಅಂಗೈಯಲ್ಲಿ ತಂದು ನೀಡುವ ಕೆಲಸವನ್ನು ದೂರ ದರ್ಶನಗಳು ಮಾಡುತ್ತವೆ.

ಖಾಸಗಿ ಸುದ್ದಿವಾಹಿನಿಗಳ ಪೈಪೋಟಿಯಿಂದಾಗಿ ಆಯಾ ಚಾನೆಲ್‌ಗಳಲ್ಲಿ ಪ್ರಸಾರವಾಗುವ ವಿದ್ಯಮಾನಗಳು ನೋಡುಗರ ಮನಸ್ಸಿನ ಮೇಲೆ ಎರಡು ಬಗೆಯ ಪ್ರಭಾವ ಬೀರವುದು ಸ್ಪಷ್ಟ. ಯಾವುದೇ ಸುದ್ದಿಯ ಸತ್ಯಾಸತ್ಯತೆ ಅರಿಯುವ ಗೋಜಿಗೆ ಹೋಗದೆ ಕೆಲವು ಖಾಸಗಿ ಚಾಲನ್‌ಗಳು ಪ್ರಸಾರ ಮಾಡುವ ಸುದ್ದಿಗಳಿಂದಾಗಿ ನೋಡುಗರು ಅದನ್ನೇ ನಿಜವೆಂದು ನಂಬಿ ಕೆಲವು ತಪ್ಪು ನಿರ್ಣಯ ತೆಗೆದುಕೊಂಡು ಅಹಿತಕರ ಘಟನೆಗಳಿಗೆ ಕಾರಣವಾಗಿ, ಸಮಾಜದಲ್ಲಿ ಶಾಂತಿ ನಮ್ಮೆದಿಯನ್ನು ಕದಡುವ ಮೂಲಕ ಶಾಂತಿಗೆ ಭಂಗ ತರುವ ಕೆಲಸವನ್ನು ಮಾಡುತ್ತಿವೆ. ಇಂತಹದಕ್ಕೆ ಚಾಲನ್‌ಗಳು ಸ್ಪೂರ್ತಿಯಾಗಬಾರದು.

ಈ ಹಿನ್ನಲೆಯಲ್ಲಿ ದೂರದರ್ಶನ ಎಚ್ಚರಿಕೆಯಿಂದ ತಮ್ಮ ಕರ್ತವ್ಯವನ್ನು ನಿರ್ವಹಿಸಬೇಕಾದುದು ಮಹತ್ವದ್ದಾಗಿದೆ. ಅಹಿತಕಾರಿ ಘಟನೆಗಳಿಗೆ ಹಾಗೂ ಜಾತಿ ಸಾಮರಸ್ಯ, ವರ್ಗ ಧರ್ಮ ನಿಂದನೆಗಳ ಮೂಲಕ ಕಲಹ ಉಂಟಾಗುವ ವಿದ್ಯಮಾನಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡದೆ ಅವುಗಳನ್ನು ಚಿಕ್ಕವುಗಳಿದ್ದಾಗಲೆ ಚಿವುಟಿ ಹಾಕುವ ನಿಟ್ಟಿನಲ್ಲಿ ದೂರದರ್ಶನ ಮುಂದಾದಲ್ಲಿ ಸ್ವಾಸ್ಥ್ಯ ಸಮಾಜ ನಿರ್ಮಾಣಕ್ಕೆ ಅವು ಕೊಡುಗೆ ನೀಡಿದಂತಯೇ ಸರಿ. ಅದೇ ರೀತಿ ಸಮಾಜದಲ್ಲಿ ಘಟಿಸುವ ಹಿತಕಾರಿ ಹಾಗೂ ಜನೋಪಯೋಗಿ ಕಾರ್ಯಗಳನ್ನು ದೂರದರ್ಶನ ಪ್ರಸಾರ ಮಾಡುವ ಮೂಲಕ ಉತ್ತಮ ಸಮಾಜ ನಿರ್ಮಾಣಕ್ಕೆ ಕೈ ಜೋಡಿಸದಂತಾಗುತ್ತದೆ. ಸಮೂಹ ಮಾಧ್ಯಮಗಳ ಪೂರ್ವಗ್ರಹ ಪೀಡಿತಕ್ಕೆ ಒಳಗಾಗದೆ, ವಸ್ತು ನಿಷ್ಠ ವರದಿಯನ್ನು ನೀಡಬೇಕು. ಅವು ಸಮತೋಲವನ್ನು ಕಾಪಾಡಬೇಕು ಸಮಾಜದ ಪ್ರಗತಿಗೆ ಬದ್ದತೆಯಿಂದ, ನಿಸ್ವಾರ್ಥದಿಂದ, ನಿಷ್ಪಕ್ಷಪಾತದಿಂದ ಕೆಲಸ ಮಾಡಬೇಕು. ಸಮಾಜದಲ್ಲಿರುವ ಕೊಳಕನ್ನು ತೆಗೆದು ಹಾಕಿ ಬೆಳಕನ್ನು ಚೆಲ್ಲವ ಕೆಲಸವನ್ನು ಮಾಧ್ಯಮಗಳು ಮಾಡಬೇಕಾಗಿದೆ. ರಾಷ್ಟ್ರದ ಅಭಿವೃದ್ಧಿಗೆ ಪೂರಕ ವಾಗುವಂತೆ ಮಾಧ್ಯಮಗಳ ನೆರವನ್ನ ಪಡೆದುಕೊಳ್ಳಲು ಸಾಧ್ಯವಾಗುವಂತಹ ಸೂಕ್ತ ಮಾಧ್ಯಮ ನೀತಿಯನ್ನು ಹೊಂದುವಂತೆ ಸಮೂಹ ಮಾಧ್ಯಮಗಳು ಕೆಲಸ ಮಾಡಬೇಕು.

**ಪರಾಮರ್ಶನ ಗ್ರಂಥಗಳು:**


1. ಸಮೂಹ ಮಾಧ್ಯಗಳು– ಡಾ.ಡಿ.ಬಿ. ನಾಯಕ್
2. ಹೊಸ ಮಾಧ್ಯಮಗಳ– ಶ್ರೀ ಬಿ.ಎಸ್. ಚಂದ್ರಶೇಖರ
3. ಸಮೂಹ ಸಂವಹನ– ಡಾ. ದೇಂದ್ರಕುಮಾರ ಹಕಾರಿ
4. ಭಾರತಿಯ ಪತ್ರಿಕೋಧ್ಯಮ– ಶ್ರೀ ಕೃಮೂರ್ತಿ ನಾಡಿಗ
5. ಸಂವಹನ ಕನ್ನಡ– ಡಾ.ಡಿ.ವ್ಹಿ. ಪರಶಿವಮೂರ್ತಿ